**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–23)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಟರಿಗಳ ಅಧಿನಿಯಮ, 1952 (1952ರ ಕೇಂದ್ರ ಅಧಿನಿಯಮ 53)ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಟರಿಗಳ ಅಧಿನಿಯಮ,1952 (1952ರ ಕೇಂದ್ರ ಅಧಿನಿಯಮ 53)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ನೋಟರಿಗಳ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ಎ ಸೇರ್ಪಡೆ.-** ನೋಟರಿಗಳ ಅಧಿನಿಯಮ, 1952 (1952ರ ಕೇಂದ್ರ ಅಧಿನಿಯಮ 53) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 3ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**3ಎ. ನೇಮಕಾತಿಯಲ್ಲಿ ಮೀಸಲಾತಿ.-** ನೋಟರಿಗಳನ್ನು ನೇಮಕ ಮಾಡುವಾಗ ರಾಜ್ಯ ಸರ್ಕಾರವು, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಅರ್ಜಿದಾರರಿಗೆ ಮೀಸಲಾತಿಯನ್ನು ಹಾಗೂ ಮಹಿಳೆಯರಿಗೆ ಮತ್ತು ದೈಹಿಕ ವಿಕಲಚೇತನ ವ್ಯಕ್ತಿಗಳಿಗೆ ಸಮತಲ ಮೀಸಲಾತಿಯನ್ನು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂತೆ ಕಲ್ಪಿಸತಕ್ಕದ್ದು:

ಪರಂತು ಮೇಲಿನ ಪ್ರವರ್ಗಗಳಿಂದ ಅಭ್ಯರ್ಥಿಗಳು ಲಭ್ಯವಿರದಿದ್ದಲ್ಲಿ, ಆಗ ಅಂಥ ಹುದ್ದೆಗಳನ್ನು ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ತುಂಬತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಕರ್ನಾಟಕ್ಕೆ ರಾಜ್ಯಕ್ಕೆ ಅನ್ವಯವಾಗುವಂತೆ ನೋಟರಿಗಳ ನೇಮಕಾತಿಗಳಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಅರ್ಜಿದಾರರಿಗೆ ಮೀಸಲಾತಿಗಾಗಿ ಹಾಗೂ ಮಹಿಳೆಯರಿಗೆ ಮತ್ತು ದೈಹಿಕ ವಿಕಲಚೇತನ ವ್ಯಕ್ತಿಗಳಿಗೆ ಸಮತಲ ಮೀಸಲಾತಿಗಾಗಿ ಉಪಬಂಧಗಳನ್ನು ಕಲ್ಪಿಸಲು, ನೋಟರಿಗಳ ಅಧಿನಿಯಮ, 1952 (1952ರ ಕೇಂದ್ರ ಅಧಿನಿಯಮ 53)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಚ್.ಕೆ. ಪಾಟೀಲ್**
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು
ಹಾಗೂ ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಮತ್ತು ಪ್ರವಾಸೋದ್ಯಮ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ನೋಟರಿಗಳ ಅಧಿನಿಯಮ, 1952**
**(1952ರ ಕೇಂದ್ರ ಅಧಿನಿಯಮ 53)ರ ಉದ್ಧೃತ ಭಾಗ**

**X X XX XX**

**3. ನೋಟರಿಗಳನ್ನು ನೇಮಕ ಮಾಡುವ ಅಧಿಕಾರ :-** ಕೇಂದ್ರ ಸರ್ಕಾರವು, ಇಡೀ ಭಾರತದ ಅಥವಾ ಅದರ ಯಾವುದೇ ಭಾಗಕ್ಕಾಗಿ, ಮತ್ತು ಯಾವುದೇ ರಾಜ್ಯ ಸರ್ಕಾರವು, ಇಡೀ ರಾಜ್ಯದ ಅಥವಾ ಅದರ ಯಾವುದೇ ಭಾಗಕ್ಕಾಗಿ ಯಾರೇ ಕಾನೂನು ವೃತ್ತಿನಿರತರನ್ನು ಅಥವಾ ನಿಯಮಿಸಬಹುದಾದಂಥ ವಿದ್ಯಾರ್ಹತೆಯನ್ನು ಹೊಂದಿರುವ ಇತರ ವ್ಯಕ್ತಿಗಳನ್ನು ನೋಟರಿಗಳಾಗಿ ನೇಮಕ ಮಾಡಬಹುದು.

**X X XX XX**

**KARNATAKA LEGISLATIVE COUNCIL**

**ONE HUNDRED AND FIFTY FIFTH SESSION**

# THE NOTARIES (KARNATAKA AMENDMENT) BILL, 2025

**(LA Bill No. 23 of 2025)**

**(As passed by the Karnataka Legislative Assembly)**

A Bill to amend the Notaries Act, 1952 (Central Act 53 of 1952) in its application to the State of Karnataka.

Whereas it is expedient to amend the Notaries Act, 1952 (Central Act 53 of 1952) in its application to the State of Karnataka for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.-** (1) This Act may be called the Notaries (Karnataka Amendment) Act, 2025.

(2) It shall come into force on such date as the State Government may, by notification in the Official Gazette, appoint.

**2. Insertion of new section 3A.-** In the Notaries Act, 1952 (Central Act 53 of 1952) after section 3, the following shall be inserted, namely:-

**"3A. Reservation in appointment.-** The State Government while appointing the notaries shall provide reservation to the applicants belonging to the Scheduled Castes, the Scheduled Tribes, other Backward Classes and Horizontal reservation to women and physically challenged persons as prescribed by the State Government from time to time :

Provided that, if a candidate from the above categories is not available, then such posts shall be filled from the persons belonging to the General Category".

## STATEMENT OF OBJECTS AND REASONS

### (As appended to at the time of Introduction)

It is considered necessary to amend the Notaries Act, 1952 (Central Act 53 of 1952) in its application to the State of Karnataka to make provisions for reservation in appointments to the applicants belonging to the Scheduled Castes, the Scheduled Tribes, other Backward Classes, Horizontal reservation to women and physically challenged persons.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**H.K. PATIL**
Minister for Law, Justice and Human Rights
and Parliamentary Affairs and Legislation
and Tourism

**K.R. MAHALAKSHMI**
Secretary
Karnataka Legislative Council

## ANNEXURE

## EXTRACT OF THE NOTARIES ACT, 1952

## (CENTRAL ACT 53 OF 1952)

**xxx** **xxx** **xxx**

**3. Power to appoint notaries.-** The Central Government, for the whole or any part of India, and any State Government, for the whole or any part of the State, may appoint as notaries any legal practitioners or other persons who possess such qualifications as may be prescribed.

**xxx** **xxx** **xxx**

Govt. Press, Vikasa Soudha, Bengalur, 20th Mar, 2025, P7, W.D. , Copies 300